**ಮಾನ್ಯ ವಿಧಾನ ಪರಿಷತ್ತಿನ ಸದ್ಯಸರಾದ ಶ್ರೀ ಎಸ್ ರವಿ, ಶ್ರೀ ಮಂಜುನಾಥ್ ಭಂಡಾರಿ, ಶ್ರೀಮತಿ ಉಮಾಶ್ರೀ, ಶ್ರೀ ರಾಮೋಜಿಗೌಡ, ಶ್ರೀ ಎಂ.ನಾಗರಾಜು ಹಾಗೂ ಶ್ರೀ ಹೆಚ್.ಪಿ. ಸುಧಾಮ್ ದಾಸ್ ರವರುಗಳುನಿಯಮ 72 ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಪ್ರಶ್ನೆ : HIV ಪೀಡಿತರ ರಕ್ತವನ್ನು ಆರೋಗ್ಯವಂತರಿಗೆ ಹನಿಟ್ರ್ಯಾಪ್ ಪ್ರಕರಣಗಳಲ್ಲಿ ಇಂಜೆಕ್ಟ್ ಮಾಡುವ ಮೂಲಕ ಸಮಾಜ ಘಾತಕ ವ್ಯಕ್ತಿಗಳು HIV ಸೋಂಕನ್ನು ಪ್ರತಿಷ್ಠಿತ ವ್ಯಕ್ತಿಗಳಿಗೆ ಹರಡಿಸುವ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿರುವ ಕೃತ್ಯವು ಸಾರ್ವಜನಿಕರನ್ನು ಆತಂಕಕ್ಕೆ ಈಡುಮಾಡುತ್ತಿರುವ ಕುರಿತು.

ಉತ್ತರ :

ಹೆಚ್.ಐ.ವಿ ಪೀಡಿತರ ರಕ್ತವನ್ನು ಆರೋಗ್ಯವಂತರಿಗೆ ಹನಿಟ್ರ್ಯಾಪ್ ಮತ್ತು ಇಂಜೆಕ್ಟ್ ಮಾಡುವ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಮುನಿರತ್ನ ರವರ ವಿರುದ್ದ ದಾಖಲಾಗಿರುವ ಪ್ರಕರಣದ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಹೆಚ್‌ಡಿ 78 ಎಸ್‌ಡಿಎನ್ 2024

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು

# ಅನುಬಂಧ

| ಪೊಲೀಸ್ ಠಾಣೆ ಹೆಸರು | ಮೊ.ಸಂ. ಮತ್ತು ಕಲಂ | ಪಿರ್ಯಾದುದಾರರ /ಸಂತ್ರಸ್ಥೆ ಹೆಸರು | ಆರೋಪಿಗಳ ಹೆಸರು ಮತ್ತು ವಿಳಾಸ | ಪ್ರಕರಣದ ಪ್ರಸ್ತುತ ಹಂತ | ಷರಾ |
|---|---|---|---|---|---|
| ರಾಮನಗರ ಜಿಲ್ಲೆ ಕಗ್ಗಲೀಪುರ ಪೊಲೀಸ್ ಠಾಣೆ | 312/2024 ಕಲಂ: 354(ಎ), 354(ಸಿ), 376(2)(ಎನ್), 308, 406, 384, 120(ಬಿ), 504, 506 ರೆ/ವಿ 149 ಐಪಿಸಿ ಜೊತೆಗೆ ಕಲಂ–66, 66(ಇ) ಐ.ಟಿ | ನೊಂದ ಮಹಿಳೆ | 1) ಮುನಿರತ್ನ<br>2) ವಿಜಯಕುಮಾರ,<br>3) ಸುಧಾಕರ,<br>4) ಕಿರಣ್ ಕುಮಾರ್,<br>5) ಲೋಹಿತ್ ಗೌಡ,<br>6) ಮಂಜುನಾಥ,<br>7) ಶ್ರೀನಿವಾಸ<br>8) ಬಿ. ಐಯ್ಯಣ್ಣ ರೆಡ್ಡಿ | ದೋಷಾರೋಪಣಾ ಪಟ್ಟಿಯನ್ನು ಸಿದ್ದಪಡಿಸಿ, ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು, ಸಿ.ಸಿ. ನಂಬರ್ ಬರುವುದು ಬಾಕಿ ಇರುತ್ತದೆ. | 1) ಒಟ್ಟು 90 ಜನ ಸಾಕ್ಷಿ ಹೇಳಿಕೆ ಪಡೆದಿದೆ.<br>2) ಕಲಂ 183 ಬಿಎನ್‌ಎಸ್‌ಎಸ್ ರೀತ್ಯಾ 8 ಜನರ ಸಾಕ್ಷಿ ಹೇಳಿಕೆ ಪಡೆದಿದೆ.<br>3) ಆರ್ಟಿಕಲ್‌ಗಳನ್ನು ಎಫ್‌ಎಸ್‌ಎಲ್ & ಸಿಎಫ್‌ಎಸ್‌ಎಲ್‌ಗೆ ಕಳುಹಿಸಿದೆ<br>4) ಸಂಬಂಧಪಟ್ಟ ದಾಖಲಾತಿಗಳನ್ನು ಸಂಗ್ರಹಿಸಿದೆ. |

ದಿ.18/9/2024 ರಂದು 21.00 ಗಂಟೆಗೆ ನೊಂದ ಮಹಿಳೆ ನೀಡಿದ ದೂರಿನಲ್ಲಿ ಎಂ.ಎಲ್‌ಎ ಮುನಿರತ್ನ ರವರು ವಾಟ್ಸಆಪ್ ವಿಡಿಯೋ ಕಾಲ್ ಮೂಲಕ ನಗ್ನವಾಗಿ ತೋರಿಸುವಂತೆ ನನ್ನನ್ನು ಪೀಡಿಸಿರುತ್ತಾರೆ ಹಾಗೂ ಹಲವು ಬಾರಿ ನನ್ನನ್ನು ಅತ್ಯಾಚಾರ ಮಾಡಿ, ನನ್ನ ಅಶ್ಲೀಲ ವಿಡಿಯೋ ಸಂಗ್ರಹಿಸಿ ನನಗೆ ಬ್ಲಾಕ್ ಮೇಲ್ ಮಾಡಿ, ಹೆದರಿಸಿ, ನನ್ನಿಂದ ಕೆಲವು ವ್ಯಕ್ತಿಗಳ ಆಶ್ಲೀಲ ವಿಡಿಯೋವನ್ನು ಮಾಡಿಸಿ ಹನಿಟ್ರ್ಯಾಪ್ ಮಾಡಿಸಿರುತ್ತಾರೆ ಮತ್ತು ತನ್ನ ವಿರೋಧಿಗಳಿಗೆ ಹೆಚ್.ಐ.ವಿ ಪೀಡಿತ ಮಹಿಳೆಯನ್ನು ಕಳುಹಿಸಿ ಅವರ ಜೊತೆ ಲೈಂಗಿಕ ಕ್ರಿಯೆ ಮಾಡುವಂತೆ ಮಾಡಿಸಿ, ಅವರ ಅಶ್ಲೀಲ ವಿಡಿಯೋವನ್ನು ಸಂಗ್ರಹಿಸಿರುತ್ತಾರೆ. ಹಾಗೂ ಕಿರಣ್ ಕುಮಾರ್ ನಾಯ್ಡು ಮತ್ತು ಇತರರ ಜೊತೆ ಸಂಚು ರೂಪಿಸಿ ವಿದ್ಯಾಹಿರೇಮಠ್ ಎಂಬ ಮಹಿಳೆಯ ಅಶ್ಲೀಲ ಫೋಟೋ ಮತ್ತು ವಿಡಿಯೋವನ್ನು ಸಂಗ್ರಹಿಸಿರುತ್ತಾರೆ. ಹಾಗೂ ಆಕೆಯ ಮೇಲೆ ಸುಳ್ಳುದೂರು ದಾಖಲಿಸಿರುತ್ತಾರೆ. ಅವರು ಹೇಳಿದಂತೆ ಕೇಳದಿದ್ದರೆ ನನ್ನ ಮಗನನ್ನು ಕಿಡ್ನಾಪ್ ಮಾಡಿಸುತ್ತೇನೆಂದು ನಿನ್ನ ಅಶ್ಲೀಲ ವಿಡಿಯೋವನ್ನು ಬಿಡುತ್ತೇನೆಂದು ನನ್ನನ್ನು ಹೆದರಿಸಿ, ಬ್ಲಾಕ್‌ಮೇಲ್ ಮಾಡಿರುತ್ತಾರೆಂದು ಇತ್ಯಾದಿಯಾಗಿ ನೀಡಿದ ದೂರಿನ ಅನ್ವಯ ರಾಮನಗರ ಜಿಲ್ಲೆಯ ಕಗ್ಗಲಿಪುರ ಪೊಲೀಸ್ ಠಾಣೆ ಮೊ.ಸಂ. 312/2024, ಕಲಂ 354(ಎ), 354(ಸಿ), 376(2)(ಎನ್), 308, 406, 384, 120(ಬಿ), 504, 506 ರೆ/ವಿ 149 ಐಪಿಸಿ ಜೊತೆಗೆ ಕಲಂ-66, 66(ಇ ) ಐ.ಟಿ ಆಕ್ಟ್ ರೀತ್ಯಾ ಪ್ರಕರಣವನ್ನು ದಾಖಲಿಸಿ ತನಿಖೆ ಕೈಗೊಂಡಿದೆ.

## ತನಿಖೆಯಿಂದ ಕಂಡು ಬಂದ ಅಂಶ

ಆರೋಪಿ ಮುನಿರತ್ನರವರು ತನಗಿದ್ದ ರಾಜಕೀಯ ಪ್ರಭಾವದಿಂದ ನೊಂದ ಮಹಿಳೆಯನ್ನು ಪರಿಚಯ ಮಾಡಿಕೊಂಡು, ಅತ್ಯಾಚಾರ ಮಾಡಿದ್ದು, ಅತ್ಯಾಚಾರ ಮಾಡಿದ ಸಮಯದಲ್ಲಿ ವೀಡಿಯೋವನ್ನು ರೆಕಾರ್ಡ್ ಮಾಡಿಕೊಂಡು ಸದರಿಯವರನ್ನು ಬೆದರಿಸಿ, ಹಲವು ಬಾರಿ ಅತ್ಯಾಚಾರ ಮಾಡಿರುತ್ತಾರೆ. ಇದೆ ವಿಡಿಯೋವನ್ನು ಇಟ್ಟುಕೊಂಡು ನೊಂದ ಮಹಿಳೆಯನ್ನು ಬೆದರಿಸಿ, ತನ್ನ ರಾಜಕೀಯ ವಿರೋಧಿಯಾದ ವಾಸುದೇವ ರವರನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಮತ್ತು ಅಪರಾಧಿಕ ಮಾನವ ಹತ್ಯೆಯನ್ನು ಮಾಡಲು ಹೆಚ್.ಐ.ವಿ ಸೋಂಕಿತ ಮಹಿಳೆಯನ್ನು ವಾಸುದೇವ್ ರವರ ಬಳಿಗೆ ನೊಂದ ಮಹಿಳೆಯ ಮುಖಾಂತರ ಕಳುಹಿಸಿ, ಲೈಂಗಿಕ ಕ್ರಿಯೆಯನ್ನು ಮಾಡುವ ಸಮಯದಲ್ಲಿ ವಿಡಿಯೋ ರೆಕಾರ್ಡ್ ಮಾಡಿಸಿಕೊಂಡು ಆ ವಿಡಿಯೋವನ್ನು ತಾನು ನೋಡಿದಲ್ಲದೇ ಬೇರೆಯವರಿಗು

ಸಹ ತೋರಿಸಿ ಪ್ರಸಾರ ಮಾಡಿರುತ್ತಾರೆ ಮತ್ತು ವಾಸುದೇವ್ ರವರಿಗೆ ಬೆದರಿಕೆ ಹಾಕಿರುತ್ತಾರೆ. ನಂತರ ವಾಸುದೇವ್ ರವರನ್ನು ರಾಜಕೀಯವಾಗಿ ಹತೋಟಿಯಲ್ಲಿಟ್ಟುಕೊಳ್ಳುವ ಸಲುವಾಗಿ ಹೆಚ್.ಐ.ವಿ ಸೋಂಕಿತ ಮಹಿಳೆಯ ಜೊತೆ ಲೈಂಗಿಕ ಕ್ರಿಯೆ ಮಾಡಿರುವ ವಿಡಿಯೋ ಸಾಲದೆಂದು ಆರೋಪಿ ಸುಧಾಕರ್ ರವರ ಮುಖಾಂತರ ನೊಂದ ಮಹಿಳೆಯ ಮನೆಯಲ್ಲಿ ಸಿಸಿ ಕ್ಯಾಮರಾಗಳನ್ನು ಫಿಟ್ ಮಾಡಿಸಿ, ವಾಸುದೇವ್ ರವರ ಬಳಿಗೆ ಇನ್ನು ಬೇರೆ ಮಹಿಳೆಯರ ಲೈಂಗಿಕ ಕ್ರಿಯೆಗಾಗಿ ಕಳುಹಿಸಿ, ವಿಡಿಯೋ ಮಾಡಿಸಿಕೊಡುವಂತೆ ನೊಂದ ಮಹಿಳೆಗೆ ಬೆದರಿಸಿರುತ್ತಾರೆ ಮತ್ತು ಆರೋಪಿ ಮುನಿರತ್ನ ರವರು ವಾಸುದೇವ್ ಮತ್ತು ಹೆಚ್.ಐ.ವಿ ಸೋಂಕಿತ ಮಹಿಳೆಯೊಂದಿಗೆ ಲೈಂಗಿಕ ಕ್ರಿಯೆ ಮಾಡುವ ಸಮಯದಲ್ಲಿ ರೆಕಾರ್ಡ್ ಮಾಡಿಸಿ ಇಟ್ಟುಕೊಂಡಿದ್ದ ವಿಡಿಯೋವಿದ್ದ ಮೊಬೈಲ್ ಫೋನ್ ಅನ್ನು ತನಿಖೆಗೆ ಹಾಜರುಪಡಿಸದೇ ಸಾಕ್ಷಿ ನಾಶಪಡಿಸಿರುತ್ತಾರೆ ಮತ್ತು ಆರೋಪಿ ಸುಧಾಕರ್‌ರವರು ನೊಂದ ಮಹಿಳೆಯ ಮನೆಯಲ್ಲಿ ಫಿಕ್ಸ್ ಮಾಡಿದ್ದ ಸಿಸಿ ಕ್ಯಾಮೆರಾಗಳನ್ನು ತನಿಖೆಗೆ ಹಾಜರುಪಡಿಸದೇ ಸಾಕ್ಷಿ ನಾಶಪಡಿಸಿರುತ್ತಾರೆ.

ಆರೋಪಿ ಮುನಿರತ್ನ ರವರು ನೊಂದ ಮಹಿಳೆಯನ್ನು ಬೆದರಿಸಿ, ತನ್ನ ರಾಜಕೀಯ ವಿರೋಧಿಯಾದ ಗಂಗಣ್ಣ ರವರ ಜೊತೆ ಸಲುಗೆ ಬೆಳೆಸಿ, ಅವರ ಜೊತೆ ಲೈಂಗಿಕ ಕ್ರಿಯೆ ಮಾಡುವ ಸಮಯದಲ್ಲಿ ವಿಡಿಯೋ ರೆಕಾರ್ಡ್ ಮಾಡಿಕೊಡುವಂತೆ ನೊಂದ ಮಹಿಳೆಗೆ ಹೇಳಿದ್ದು, ಅದಕ್ಕೆ ನೊಂದ ಮಹಿಳೆ ಒಪ್ಪದೇ ಇದ್ದಾಗ ಆರೋಪಿ ಮುನಿರತ್ನ ಮತ್ತು ಆರೋಪಿ ಶ್ರೀನಿವಾಸ್.ಪಿ. ರವರುಗಳು ನೊಂದ ಮಹಿಳೆಗೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿದ್ದರಿಂದ ನೊಂದ ಮಹಿಳೆ ಗಂಗಣ್ಣ ರವರ ಜೊತೆ ಸಲುಗೆ ಬೆಳೆಸಿ, ಲೈಂಗಿಕ ಕ್ರಿಯೆ ಮಾಡುವ ಸಮಯದಲ್ಲಿ ವಿಡಿಯೋ ರೆಕಾರ್ಡ್ ಮಾಡಿಕೊಂಡು ಬಂದು ವಿಡಿಯೋವನ್ನು ಆರೋಪಿ ಸುಧಾಕರ್.ಆರ್ ರವರಿಗೆ ಕೊಟ್ಟಿದ್ದು, ಆರೋಪಿ ಮುನಿರತ್ನರವರು ಜಿ.ಕೆ.ವೆಂಕಟೇಶ್, ಆರೋಪಿ ಸುಧಾಕರ್ ರವರ ಮುಖಾಂತರ ದಿನಾಂಕ:28-04-2023 ರಂದು ಗಂಗಣ್ಣ ರವರಿಗೆ ನೊಂದ ಮಹಿಳೆ ಮತ್ತು ಗಂಗಣ್ಣ ರವರ ಲೈಂಗಿಕ ಕ್ರಿಯೆ ಮಾಡಿದ ಸಮಯದಲ್ಲಿ ರೆಕಾರ್ಡ್ ಮಾಡಿಸಿ ಇಟ್ಟುಕೊಂಡಿದ್ದ ವಿಡಿಯೋನ ಸ್ಕ್ರೀನ್ ಶಾಟ್ ಫೋಟೋವನ್ನು ತೋರಿಸಿ ತಾನು ಹೇಳಿದಂತೆ ಕೇಳಿಕೊಂಡು ತನ್ನ ಪರವಾಗಿ ಚುನಾವಣೆಯಲ್ಲಿ ಕೆಲಸ ಮಾಡಬೇಕೆಂದು ಮತ್ತು ಮಾಡದಿದ್ದಲ್ಲಿ ನಿನ್ನ ಮರ್ಯಾದ ಹರಾಜು ಹಾಕುತ್ತೇನೆಂದು ಆರೋಪಿ ಮುನಿರತ್ನ ರವರು ಆರೋಪಿ ಸುಧಾಕರ್ ಮುಖಾಂತರ ಬೆದರಿಕೆ ಹಾಕಿಸಿರುತ್ತಾರೆ ಹಾಗೂ ನೊಂದ ಮಹಿಳೆ ಮತ್ತು ಗಂಗಣ್ಣ ರವರ ಅಶ್ಲೀಲ ವಿಡಿಯೋವಿದ್ದ ಮೊಬೈಲ್ ಫೋನ್ ಅನ್ನು ಆರೋಪಿ ಸುಧಾಕರ್ ರವರು ತನಿಖೆಗೆ ಹಾಜರುಪಡಿಸದೇ ಸಾಕ್ಷಿ ನಾಶಪಡಿಸಿರುತ್ತಾರೆ.

ಅದೇ ರೀತಿ ಆರೋಪಿ ಮುನಿರತ್ನ ರವರು ತನಗೆ ಮಂತ್ರಿ ಪದವಿ ಕೊಟ್ಟಿಲ್ಲವೆಂದು ಅಂದಿನ ಸಚಿವರಾದ ಶ್ರೀ ಆರ್.ಅಶೋಕ್ ರವರ ವಿರುದ್ಧ ಹಗೆ ಸಾಧಿಸಲು ಅಶೋಕ್.ಎಂ ರವರ ಮುಖಾಂತರ ಹೆಚ್.ಐ.ವಿ ಸೋಂಕಿತ ರಕ್ತವನ್ನು ಲೇಪಿತ ಬ್ಲೇಡ್ ನಿಂದ ಬೆರಳುಗಳ ಸಂಧಿಗಳಲ್ಲಿ ಶಾಸಕ ಶ್ರೀ ಆರ್.ಅಶೋಕ್ ರವರ ಹುಟ್ಟು ಹಬ್ಬದಂದು ಹೆಚ್.ಐ.ವಿ ಸೋಂಕನ್ನು ಸಚಿವರಿಗೆ ಯಾವ ರೀತಿ ಅಂಟಿಸಬೇಕೆಂದು ಆರೋಪಿ ಮುನಿರತ್ನ ಮತ್ತು ಆರೋಪಿ ಐಯ್ಯಣ್ಣ ರೆಡ್ಡಿ ರವರುಗಳು ಸಂಚನ್ನು ರೂಪಿಸಿದ್ದು, ಅಶೋಕ್.ಎಂ ರವರು ಹೆದರಿಕೊಂಡು, ಹಿಂಜರುಗಿದರಿಂದ ಈ ಕೃತ್ಯವು ಸಾಕಾರಗೊಂಡಿರುವುದಿಲ್ಲ. ಆರೋಪಿ ಐಯ್ಯಣ್ಣ ರೆಡ್ಡಿ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಯಾಗಿದ್ದರೂ ಸಹ ಕೃತ್ಯವನ್ನು ಸಕಾರಗೊಳಿಸುವುದಕ್ಕೆ ಯೋಜನೆಯನ್ನು ರೂಪಿಸುವುದಕ್ಕೆ ನೆರವಾಗಿರುತ್ತಾರೆ. ಆದ್ದರಿಂದ ಆರೋಪಿ ಮುನಿರತ್ನ, ಆರೋಪಿ ಸುಧಾಕರ್, ಆರೋಪಿ ಶ್ರೀನಿವಾಸ್ ಮತ್ತು ಆರೋಪಿ ಐಯ್ಯಣ್ಣ ರೆಡ್ಡಿ ರವರುಗಳು ಕಲಂ 354(ಎ), 354(ಸಿ), 376(2)(ಎನ್), 308, 120(ಬಿ), 504, 506, 270, 119, 201, 511 ರೆ/ವಿ 34 ಐಪಿಸಿ ಜೊತೆಗೆ ಕಲಂ 66(ಇ) ಮಾಹಿತಿ ತಂತ್ರಜ್ಞಾನ ಕಾಯ್ದೆ, 2000 ಅಡಿಯಲ್ಲಿ ಅಪರಾಧವೆಸಗಿರುವುದು ತನಿಖೆಯಿಂದ ದೃಢಪಟ್ಟಿರುತ್ತದೆ.